1) ಕಿತ್ತೂರು ಚೆನ್ನಮ್ಮನ ಹುಟ್ಟೂರಾದ ಕಾಕತಿಯಲ್ಲಿ ಚೆನ್ನಮ್ಮನು ವಾಸ ಮಾಡಿದ ಮನೆಯನ್ನು ಸರ್ಕಾರದವರು ವಶಪಡಿಸಿಕೊಂಡು ಅದನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡಲಾಗುವುದೆಂದು ಈ ಹಿಂದೆ ಆಶ್ವಾಸನೆಯನ್ನು ಸದನದಲ್ಲಿ ನೀಡಿದ್ದು, ಈಗ ಅದು ಯಾವ ಹಂತದಲ್ಲಿದೆ?

2) ಅವರು ವಾಸ ಮಾಡಿದ ಮನೆಯು ಈಗ ಸಂಪೂರ್ಣವಾಗಿ ನಾಶವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಚೆನ್ನಮ್ಮನು ವಾಸ ಮಾಡಿದ ಮನೆಯನ್ನು ಈಗ ಬೇರೆಯವರಿಗೆ ಹಸ್ತಾಂತರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

1) ಕಿತ್ತೂರು ರಾಣಿ ಚೆನ್ನಮ್ಮನ ಕಾಕತಿಯಲ್ಲಿನ ಅರಮನೆ ಅವಶೇಷದಲ್ಲಿ ಬಾಗಿಲುಗಳು ಕಾಣೆಯಾಗಿದ್ದು. ಆ ಬಗ್ಗೆ ಶೋಧನೆ ನಡೆಸುವ ಬಗ್ಗೆ ಆಶ್ವಾಸನೆ ಕೊಡಲಾಗಿತ್ತು.

2) ಹೌದು

3) ಇಲ್ಲ

ಸಂಗೊಳ್ಳಿ ಗ್ರಾಮದಲ್ಲಿ ರಾಯಣ್ಣನ ಮೂರ್ತಿಯ ಸುತ್ತಲು ಹೊನಲು ಬೆಳಕು ಯೋಜನೆ

208. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ರಾಯಣ್ಣನ ಮೂರ್ತಿಯ ಸುತ್ತಲ ಹೊನಲು ಬೆಳಕು ಯೋಜನೆಯನ್ನು ಕೈಕೊಳ್ಳುವಂತೆ ಸದನದಲ್ಲಿ ಆಶ್ವಾಸನೆ ನೀಡಲಾಗಿರುವುದು ಮತ್ತು ಈ ಆಶ್ವಾಸನೆ ಪ್ರಕಾರ ಕಾರ್ಯಕಾರಿ ಅಭಿಯಂತರರು ಲೋಕೋಪಯೋಗಿ ಇಲಾಖೆ ಸಂಪರ್ಕ ಮತ್ತು ಕಟ್ಟಡ ವಿಭಾಗ ಬೆಳಗಾವಿ ಇವರಿಗೆ ನಕ್ಷೆ ಹಾಗೂ ಅಂದಾಜು ತಯಾರಿಸಲು ತಿಳಿಸಲಾಗಿರುವುದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಹೌದು

ಆ) ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಕಳುಹಿಸಲು ಕಾರ್ಯಕಾರಿ ಅಭಿಯಂತರರು,ಲೋಕೋಪಯೋಗಿ ಇಲಾಖೆ, ಬೆಳಗಾಂ, ಇವರನ್ನು ಕೋರಲಾಗಿದೆ.

U.K. District as Tourist Centres

(642) SRI. R.V. DESHPANDE (haliyala) : Will the Chief Minister be pleased to State?

a) Which are the places indentified in U.K. District as Tourist Centres?

b) If so, has any transport facilities been provided by the KSTD to these places?

c) If not, will the Government take necessary steps for providing the transport facilities to these places by the tourim Corporation?

S. BANGARAPPA (Chief Minister)

a) 18, places are identified. (Details are over-leaf)

b) The KSTDC has provided conducted tours to Goa where this facility has been extended to Karwar also.

c) At present there is no proposal for running the bus in North Kanara District.

TOURIST PLACES IDENTIFIED IN NORTH KANARA DISTRICT

1) Ullavi
2) Karwar
3) Magod Falls
4) Dandeli
5) Sonda
6) Haliyala
7) Yana
8) Gokarna
9) Unchalli
10) Lalgulli Falls
11) Banavasi
12) Supa
13) Ankola
14) Kumta
15) Kurmagod
16) Anjadev Island
17) Jaggar Valley
18) Castle Rock

ಕೋಲಾರ ಜಿಲ್ಲೆಯಲ್ಲಿ ಎಸ್.ಸಿ. ಮತ್ತು ಎಸ್.ಟಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಿರುವ ಬಗ್ಗೆ

512. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989ನೇ ಜನವರಿಯಿಂದ ಇಲ್ಲಿಯವರೆಗೆ ಕೋಲಾರ ಜಿಲ್ಲೆಯಲ್ಲಿ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡಲಾಗಿದೆ? (ತಿಂಗಳುವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ಸ್ಕಾಲರ್‌ಶಿಪ್ ಪೂರ್ತಿ ಮೊತ್ತವೆಷ್ಟು?

ಇ) 1990ರ ಮಾರ್ಚ್ 31 ರಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈ ಸ್ಕಾಲರ್‌ಶಿಪ್ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿ ಜೂನ್ ತಿಂಗಳವರೆಗೆ ವಿದ್ಯಾರ್ಥಿಗಳಿಗೆ ನೀಡಿಲ್ಲದಿರುವುದು ನಿಜವೆ?

ಈ) ಕೋಲಾರ ಜಿಲ್ಲೆಯ ಕಂಗಾಂಡ್ಲಹಳ್ಳಿ ಹೈಯರ್ ಪ್ರೈಮರಿ ಶಾಲೆಯಲ್ಲಿನ 25 ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ 31–3–90 ರಂದು ನೀಡಿದ ಚೆಕ್ಕನ್ನು 5–5–90ರಂದು ಬ್ಯಾಂಕಿಗೆ ಕಟ್ಟಿದ್ದರೂ ಇದುವರೆವಿಗೆ ಮಕ್ಕಳಿಗೆ ಹಣ ತಲುಪಿಲ್ಲದಿರುವುದು ನಿಜವೇ?